ಓ ಎಸ್ ನಂ.89/2023

ಪಿ.ಡಬ್ಲ್ಯೂ-1 ರುಕ್ಮೀಣಿ ಗಂಡ ಸಿದ್ದರಾಮ ಸಂಗೋಳಗಿ

**(ಇಂದು ದಿನಾಂಕಃ 30-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

<u>ಪಾಟೀ ಸವಾಲುಃ ೩ನೇ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ.</u>

ನಮ್ಮ ತಂದೆ ಬಸಣ್ಣರವರಿಗೆ ೬ ಜನ ಮಕ್ಕಳಿರುತ್ತೇವೆ. ನಾವು ೩ ಜನ ಗಂಡು ಮಕ್ಕಳು ಮತ್ತು ೩ ಜನ ಹೆಣ್ಣುಮಕ್ಕಳು ಇರುತ್ತೇವೆ. ನನ್ನ ಮದುವೆಯಾಗಿ ಸುಮಾರು ೩೦ ವರ್ಷಗಳಾಗಿರುತ್ತವೆ. ಸುಮಾರು ೧೮ ವರ್ಷಗಳ ಹಿಂದೆ ನನ್ನ ಸಹೋದರಿಯರಾದ ಜಗದೇವಿ ಮತ್ತು ಮಹಾನಂದರವರ ಮದುವೆಯಾಗಿರುತ್ತವೆ. ೪ನೇ ವಾದಿ ಸಿದ್ದಪ್ಪ ೫ನೇ ವಾದಿ ಶಂಕರಲಿಂಗ ಮತ್ತು ೬ನೇ ಪ್ರತಿವಾದಿ ಲಕ್ಷ್ಮೀಕಾಂತ ಬೇರೆ-ಬೇರೆಯಾಗಿ ಇರುತ್ತಾರೆ ಎಂದರೆ ಸರಿ. ನನ್ನ ಅಜ್ಜನ ಹೆಸರು ವಿಠೋಬಾ ಆಗಿರುತ್ತದೆ. ನನ್ನ ಅಜ್ಜ ಮತ್ತು ನನ್ನ ತಂದೆ ಇಬ್ಬರು ಸೇರಿ ೩ನೇ ಪ್ರತಿವಾದಿ ಮಲಕಪ್ಪ ಮತ್ತು ೪ ಮತ್ತು ೫ನೇ ಪ್ರತಿವಾದಿಗಳ ತಂದೆಯಾದ ಶಿವಲಿಂಗಪ್ಪರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ೩ನೇ ಪ್ರತಿವಾದಿ ಮಲಕಪ್ಪ ಕೂಡಾ ಪಾಲು ಕೇಳಿ ದಾವೆ ಹೂಡಿರುತ್ತಾರೆ ಎಂದರೆ ಸರಿ.

೨. ಸರ್ವೆ ನಂಬರ ೧೧೬ ರ ೧೨ ಎಕರೆ ೩೧ ಗುಂಟೆ ಜಮೀನು ಮುಳುಗಡೆಯಾಗಿ ಪರಿಹಾರ ನೀಡಲು ಆದೇಶ ಹೊರಡಿಸಿರುತ್ತಾರೆ ಎಂದರೆ ಸರಿ. ೧ನೇ ಪ್ರತಿವಾದಿ ಚಂದ್ರಷಾ ನಮ್ಮ ೨ನೇ ಅಣ್ಣ-ತಮ್ಮಂದಿರು ಆಗಿರುತ್ತಾರೆ. ಸರ್ವೆ ನಂಬರ ೧೧೬ ರ ಒಟ್ಟು ೧೨ ಎಕರೆ ೯ ಗುಂಟೆ ಜಮೀನು ಇತ್ತು. ಸದರಿ ಜಮೀನಿನಲ್ಲಿ ಚಂದ್ರಷಾರವರಿಗೆ ಅರ್ಧ ಜಮೀನು ಮತ್ತು ನಮಗೆ ಅರ್ಧ ಜಮೀನು ಇರುತ್ತದೆ. ದಾವೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ೨ ಎಕರೆ ೧ ಗುಂಟೆ ಜಮೀನು ಮುಳುಗಡೆಯಾಗಿ ೧ ಗುಂಟೆ ಪೋಟ ಕರಾಬ ಇದ್ದು, ೯ ಗುಂಟೆ

ಜಮೀನು ಸಾಗುವಳಿ ಇರುತ್ತದೆ ಎಂದು ಬರೆಸಿರುತ್ತೇವೆ ಎಂದರೆ ಸರಿ. ಖರೀದಿ ನೀಡಿದ ಜಮೀನನ್ನು ಬಿಟ್ಟು ನಮಗೆ ೨ ಎಕರೆ ೧೧ ಗುಂಟೆ ಜಮೀನು ಉಳಿದಿದೆ ಎಂದು ಕಾಗದ ಪತ್ರದಲ್ಲಿ ಬರೆಸಿರುತ್ತೇವೆ ಎಂದರೆ ಸರಿ. ನಮ್ಮ ೨ ಎಕರೆ ೧ ಗುಂಟೆ ಜಮೀನು ಮುಳುಗಡೆಯಾಗಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ೯ ಗುಂಟೆ ಜಮೀನು ನಮಗೆ ಸಾಗುವಳಿ ಮಾಡಲು ಇನ್ನೂ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ.

೩. ೧ ಎಕರೆ ೩೦ ಗುಂಟೆ ಮತ್ತು ೪ ಎಕರೆ ೧ ಗುಂಟೆ ಜಮೀನುಗಳೂ ಕೂಡಾ ಮುಳುಗಡೆಗೊಂಡಿವೆ ಎಂದರೆ ಸರಿ. ಉಳಿದ ೯ ಗುಂಟೆ ಜಮೀನು ದಕ್ಷಿಣ ದಿಕ್ಕಿಗೆ ಉಳಿದಿರುತ್ತದೆ. ಮುಳುಗಡೆಗೊಂಡ ಜಮೀನಿನ ಹಣ ನ್ಯಾಯಾಲಯದಲ್ಲಿ ಜಮೆ ಆಗಿವೆ ಎಂದರೆ ಸರಿ. ೩ ರಿಂದ ೫ನೇ ಪ್ರತಿವಾದಿಗಳ ಜಮೀನೂ ಕೂಡಾ ಮುಳುಗಡೆಯಾಗಿದ್ದು, ಪರಿಹಾರದ ಹಣದಲ್ಲಿ ಅವರಿಗೂ ಕೂಡಾ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ೧ನೇ ಪ್ರತಿವಾದಿಯ ಜಮೀನು ಇರುತ್ತದೆ. ನಮ್ಮ ಜಮೀನಿನ ಉತ್ತರಕ್ಕೆ ೩ ರಿಂದ ೫ನೇ ಪ್ರತಿವಾದಿಗಳ ಜಮೀನು ಇರುತ್ತದೆ. ಸಾಕ್ಷಿಯು ನಾವು ಮಾರಾಟ ಮಾಡಿಲ್ಲ ಜಮೀನು ವತ್ತಿ [ಅಡಮಾನ] ಹಾಕಿರುತ್ತೇವೆ ಎನ್ನುತ್ತಾರೆ. ಸದರಿ [ವತ್ತಿ] ಅಡಮಾನ ಹಾಕಿದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಿರುವುದರಿಂದ ಅವರ ಪಾಟೀ ಸವಾಲಿಗೆ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.